**ಅ.ದಾವಾ ನಂ. 161/17** ಪಿ.ಡಬ್ಲ್ಯೂ-2

**ದಿನಾಂಕ 24/11/2022 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಇ.ಎಸ್ ವಕೀಲರಿಂದ**

ನನ್ನ ಹೆಸರು ರಾಜೇಗೌಡ ಆಗಿರುತ್ತದೆ. ನನಗೆ ನ್ಯಾಯಾಲಯದಿಂದ ಸಾಕ್ಷ್ಯನುಡಿಯಲು ತಿಳುವಳಿಕೆ ಪತ್ರ ಬಂದಿತ್ತು. ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಸಾಕ್ಷ್ಯನುಡಿಯಲು ಮೊದಲನೇ ವಾದಿ ಕರೆದುಕೊಂಡು ಬಂದಿರುತ್ತಾರೆ. ನನ್ನ ತಂದೆಯ ವಿರುದ್ಧ ದಾವೆ ಸಲ್ಲಿಸಿದ್ದು, ಈ ರೀತಿಯೇ ಸಾಕ್ಷ್ಯ ನುಡಿಯಬೇಕೆಂದು ಹೇಳಿ ರಮೇಶ ನನ್ನನ್ನು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ವಾದಿ ಕುಟುಂಬದ ಎಲ್ಲಾ ಸರ್ವೆ ನಂಬರುಗಳ ವಿಚಾರವೂ ನನಗೆ ಗೊತ್ತು. ಈ ದಾವೆಯನ್ನು ವಾದಿ 74/4 ಮತ್ತು 74/2 ಕ್ಕೆ ಸಲ್ಲಿಸಿರುತ್ತಾರೆ. ಮೊದಲನೇ ಪ್ರತಿವಾದಿ ಸರ್ಕಾರಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಮೊದಲನೇ ಪ್ರತಿವಾದಿಗೆ ಸರ್ಕಾರದಿಂದ ಸಂಬಳ ಬರುತ್ತಿತ್ತು ಎಂದರೆ ಸರಿ. ಮೊದಲನೇ ಪ್ರತಿವಾದಿಗೆ ನಿವೃತ್ತರಾದ ನಂತರ ಪಿಂಚಣಿ ಹಣ ಬಂದಿದೆ ಇಲ್ಲವೋ ನನಗೆ ಗೊತ್ತಿಲ್ಲ.

2. ನನ್ನ ಸ್ವಂತ ಊರು ಬಂಟರಹಳ್ಳಿ. ನಾನು ಮತ್ತು ಮೊದಲನೇ ಪ್ರತಿವಾದಿ ಮಾತಿನ ಸಂಬಂಧ ಇಟ್ಟುಕೊಂಡಿರುತ್ತೇವೆ. ನಾನು ಈ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕರಣಗಳಲ್ಲೂ ಸಾಕ್ಷ್ಯ ನುಡಿದಿರುವುದಿಲ್ಲ. ನಾನು 50 ವರ್ಷಗಳಿಂದಲೂ ನ್ಯಾಯಾಲಯಗಳ ಸುತ್ತ ಸುತ್ತುತ್ತಾ ಇದ್ದೇನೆ. ನನಗೆ ಒಟ್ಟು 9 ಮಕ್ಕಳಿದ್ದು 3 ಗಂಡು ಮಕ್ಕಳಿರುತ್ತಾರೆ. ಸಾಕ್ಷಿಗೆ ತಾನು ಸಲ್ಲಿಸಿರುವ ಪ್ರಮಾಣ ಪತ್ರ ತೋರಿಸಲಾಗಿ ಇದು ಯಾರು ಬರೆದದ್ದು ಎಂದು ಕೇಳಲಾಗಿ ಸಾಕ್ಷಿ ಹೇಳುತ್ತಾರೆ ರಮೇಶ ಮತ್ತು ವಕೀಲರು ಸೇರಿ ಬರೆಸಿರುತ್ತಾರೆ ಎಂದು. ದಾವಾ ಅನುಸೂಚಿ 'ಎ' ಸ್ವತ್ತುಗಳು ಮಾತ್ರ ಪಿತ್ರಾರ್ಜಿತ ಸ್ವತ್ತುಗಳಾಗಿದ್ದು ಬಾಕಿ ಎಲ್ಲವೂ ಮೊದಲನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ ' ಬಿ ' ಯಿಂದ 'ಡಿ' ಅನುಸೂಚಿ ಸ್ವತ್ತುಗಳು ಮೊದಲನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳಲ್ಲಿ ವಾದಿಗೆ ಭಾಗ ಇಲ್ಲದೇ ಇದ್ದರೂ ವಾದಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಳೆನರಸೀಪುರ.